ಕನ್ನಡದ ಆದ್ಯ ಕತೆಗಾರರಲ್ಲಿ ಒಬ್ಬರಾದ ಪಂಜೆ ಮಂಗೇಶರಾಯರು ಬರೆದ ಕತೆಗಳಲ್ಲಿ ಒಂದರ ಹೆಸರು 'ಕಮಲಪುರದ ಹೋಟ್ಲಿನಲ್ಲಿ' ಎಂದು. ಅಂದರೆ ಸಾಹಿತ್ಯದಲ್ಲಿ ಹೋಟೆಲುಗಳ ಪ್ರಭಾವ ಸಾಹಿತ್ಯ ಚರಿತ್ರೆಯಷ್ಟೇ ಹಳೆಯದು. ಈ ಒಂದು ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ಅದೆಷ್ಟು ಹೋಟೆಲುಗಳು ಬಂದಿವೆಯೋ. ಈಗಂತು 'ಕಾಫಿ ಡೇ' ಕವಿತೆಗಳೂ ಬಂದಿವೆ. ಪಬ್ ಕತೆಗಳು ಬಂದಿವೆ. ಕಾಫಿ ಡೇಯಲ್ಲಿ ಹೇಗೆ ಹೇಗೋ ಎಲ್ಲ ದಿಕ್ಕಿಗೂ ಕೂತುಕೊಂಡು ಕವಿತೆ ಓದುವ ಸಂಭ್ರಮವೊಂದು ಶುರುವಾಗಿದೆ. ಹೋಟೆಲಿನ ಮಸಾಲೆದೋಸೆ ನೆನೆಯುತ್ತ ಪು.ತಿ.ನ. ತಮ್ಮ ಪ್ರಬಂಧದಲ್ಲಿ ಬರೆದುದು 'ಹಬೆಯಿಂದ ಘ್ರಾಣೇಂದ್ರಿಯವನ್ನು ವಿಭ್ರಮೆಗೊಳಿಸುತ್ತ ನಿಮ್ಮ ಹಸ್ತಗತವಾಗಿರುವ ಈ ವಸ್ತು ಮನೆಯಲ್ಲಿ ದೊರೆಯುವ ವಸ್ತುವೆ, ಮಠದಲ್ಲಿ ದೊರೆಯುವ ವಸ್ತುವೇ?' ಎಂದು. ಮನೆ ಮಠಗಳನ್ನು ಮೀರಿದಾಗಲೇ ನಮಗೆ ಸಿಗುವುದು ಹೋಟೆಲಿನ ಮಸಾಲೆದೋಸೆಯ ಸ್ವಾದ ಎಂದು ಅವರು ನಿಸ್ಸಂಶಯವಾಗಿ ಪ್ರತಿಸ್ಥಾಪಿಸಿದ ಮೇಲೆ, ಇದುವರೆಗೂ ಯಾವುದೇ ರೀತಿಯ ಭಿನ್ನಾಭಿಪ್ರಾಯ ಯಾವುದೇ ಎಡ, ಬಲ, ಸ್ತ್ರೀವಾದದಿಂದಲೂ ಬಂದಿಲ್ಲ. ಹೋಟೆಲಿನ ದೋಸೆ ಎಲ್ಲ ಇಸಂಗಳನ್ನು ಮೀರಿದ್ದು. ರಾಜ್ಯಕ್ಕೆ ಬರ ಬಂದಿರುವುದರಿಂದ ವಿಶ್ವ ಕನ್ನಡ ಸಮ್ಮೇಳನ ಬೇಡ ಎಂಬ ಕೂಗು ಎದ್ದಾಗ ಸಾಹಿತಿ ಶಿವರಾಮ ಕಾರಂತರು ಗದರಿದ್ದು 'ಬರ ಬಂದಿದೆ ಅಂತ ಮಸಾಲೆ ದೋಸೆ ತಿನ್ನೋದು ಬಿಡ್ತಾರೇನ್ರೀ?...' ಅಂದರೆ ಕನ್ನಡ ಸಾಹಿತಿಗಳು ತಮಗೆ ಸಾಧ್ಯವಿದ್ದಾಗೆಲ್ಲ ಮಸಾಲೆದೋಸೆಯನ್ನೂ ತನ್ಮೂಲಕ ಹೋಟೆಲನ್ನೂ ನೆನೆದಿದ್ದಾರೆ, ಸವಿದಿದ್ದಾರೆ. ಕಾದಂಬರಿಕಾರ ಎಸ್.ಎಲ್. ಭೈರಪ್ಪನವರು ಒಂದು ಹೆಜ್ಜೆ ಮುಂದುವರಿದು ತಾವು ಹೋಟೆಲಿನಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡಿದ್ದನ್ನು ಆತ್ಮಕತೆ 'ಭಿತ್ತಿ'ಯಲ್ಲಿ ನೆನಪಿಸಿಕೊಂಡಿದ್ದಾರೆ. ಲೇಖಕರಾದ ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ ಇತ್ಯಾದಿಗಳು ಮೈಸೂರಿನ ಕಾಫಿ ಹೌಸ್‌ನಲ್ಲಿ ಕೂತು ಕಾಫಿ ಕುಡಿಯುತ್ತ ನವ್ಯ ಸಾಹಿತ್ಯದ ಸ್ಫೂರ್ತಿ ಪಡೆದಿದ್ದನ್ನು ಇಂದಿಗೂ ಅನೇಕರು ನೆನೆಯುತ್ತಾರೆ. ಆದರೆ ಹೀಗೆ ಸಾಹಿತಿಯಾಗಬಹುದಾದ ಯಾವ ಮುನ್ಸೂಚನೆಯೂ ಇರದಿದ್ದ ಕಾಲದಲ್ಲಿ ಈ ಪ್ರಬಂಧಕಾರ ತನ್ನ ಹದಿನೈದನೇ ವಯಸ್ಸಿನಲ್ಲಿ ಚಿಕ್ಕ ಜಾಜೂರು ಎಂಬ ಊರಿನ ರಘು ಹೋಟೆಲ್‌ನಲ್ಲಿ ಕೂತು ತಾನು ತಿಂದ ಸಿಂಗಲ್ ಖಾಲಿ ದೋಸೆಯ ಮಧ್ಯಾಹ್ನಗಳನ್ನು ಇಂದಿಗೂ ನೆನೆಯುತ್ತಿದ್ದು ಇದನ್ನು ಹಸಿವೆಗೆ ಟ್ಯಾಗ್ ಮಾಡಬೇಕೋ, ಸಾಹಿತ್ಯಕ್ಕೆ ಟ್ಯಾಗ್ ಮಾಡಬೇಕೋ ತಿಳಿಯದೆ ಗಲಿಬಿಲಿಗೊಂಡಿದ್ದಾನೆ. ಗುಂಜಿಗನೂರು ಎಂಬ ಊರಿನಿಂದ ದಿನವೂ ನಡೆದು ಬಂದು ಓದುತ್ತಿದ್ದ ನನಗೆ, ಮಗ ಎಸ್ಸೆಸ್ಸೆಲ್ಸಿಗೆ ಬಂದಿರುವುದರಿಂದಲೂ, ಒಳ್ಳೆಯ ಫಲಿತಾಂಶ ತರಬೇಕಾದ ವರ್ಷ ಇದಾಗಿರುವುದರಿಂದಲೂ, ಮಧ್ಯಾಹ್ನದ ಖಾಲಿ ಹೊಟ್ಟೆಯು ಅಂಕಗಳ ಮೇಲೆ ದುಷ್ಪರಿಣಾಮ ಬೀರುವುದು ಬೇಡವೆಂತಲೂ ಪ್ರಾಥಮಿಕ ಶಾಲಾ ಮಾಸ್ತರರಾಗಿದ್ದ ನನ್ನ ತಂದೆ ತಮ್ಮ ಸಂಬಳದಲ್ಲಿ ನಿತ್ಯವೂ ನನಗಾಗಿ ಹದಿನೈದು ಪೈಸೆ ವ್ಯಯಿಸುವ ಲಕ್ಷುರಿ ಹೊಡೆತವನ್ನು ತಡೆದುಕೊಳ್ಳಲು ಸಿದ್ಧರಾಗಿದ್ದರು. ಆದರೆ ಇದರ ಪ್ರಯೋಜನವಾಗದೆ ನಾನು ಥರ್ಡ್ ಕ್ಲಾಸ್ ನಲ್ಲಿ ಪಾಸಾದುದರಿಂದ ಮುಂದೆ ಕಾಲೇಜಿಗೆ ಮತ್ತೂ ದೂರದ ಹೊಳಲ್ಕೆರೆಗೆ ಹೋಗಬೇಕಾದಾಗ ಆ ಲಕ್ಷುರಿ ಸವಿಯಲ್ಲಿನ ಐದು ಪೈಸೆ ಖೋತಾ ಆಗಿ 10 ಪೈಸೆಯ ಖಾರಾ ಬನ್‌ಗೆ ಸೀಮಿತಗೊಳಿಸಿಕೊಳ್ಳಬೇಕಾಯಿತು. ಅದು ಬೇರೆಯೇ ಕತೆ. ನನ್ನ ರಿಸಲ್ಟ್ ಅನ್ನು ದೋಸೆಗೆ ಟ್ಯಾಗ್ ಮಾಡಬೇಕೋ ನನ್ನ ಬುದ್ಧಿಗೆ ಟ್ಯಾಗ್ ಮಾಡಬೇಕೋ ಇನ್ನೂ ತಿಳಿದಿಲ್ಲ.

ಆದರೆ ರಘು ಹೋಟೆಲಿನ ಒಳ ಕೋಣೆಯ ಹೊಗೆ, ಬಿಸಿಲು ಕೋಲು, ಪಾತ್ರೆ ತೊಳೆಯುವ